ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸಂಡೂರು.

ಸಿ. ಸಿ. ಸಂಖ್ಯೆ **498/2020** ಸಿ.ಡಬ್ಲೂ **01,** ಪಿ.ಡಬ್ಲೂ **01**

| | | |
|---|---|---|
| ಸಾಕ್ಷಿಯ ಹೆಸರು | - ಬಂಗಾರಮ್ಮ | ದಿನಾಂಕ 19-09-2022 |
| ಗಂಡನ ಹೆಸರು | - ರವೇಶ | ರಂದು ಪ್ರಮಾಣ ವಚನ |
| ವಯಸ್ಸು | - 30 ವರ್ಷ | ಮಾಡಿಸಲಾಯಿತು. |
| ಉದ್ಯೋಗ | - ವ್ಯವಸಾಯ | |
| ವಾಸ ಸ್ಥಳ | - ದೊಡ್ಡಅಂತಾಪುರ | |

**ಮುಖ್ಯ ವಿಚಾರಣೆ ಸಸಅ ರವರಿಂದ**

* * * *

2020 ರಲ್ಲಿ ನಾವು ಬೆಳ್ಳಿಗ್ಗೆ 9 ಗಂಟೆಗೆ ನಮ್ಮ ಮನೆಯ ಬಾಗಿಲನ್ನು ಹಾಕಿಕೊಂಡು ಸೊಸೈಟಿಯಲ್ಲಿ ಅಕ್ಕಿ ಮತ್ತು ಗೋದಿಯನ್ನು ತರಲು ಹೋಗಿದ್ದೆನು. 10 ಗಂಟೆಗೆ ನಾನು ವಾಪಸ್ಸು ಬಂದ ನಂತರ ಮನೆಯಲ್ಲಿ ಬಟ್ಟೆಗಳನ್ನು ಮಡಚಿ ಗಾಡ್ರೇಜ ನಲ್ಲಿ ಇಡಲು ಹೋದಾಗ ಗಾಡ್ರೇಜ್ ಲಾಕರ್ ತೆರೆದಿತ್ತು ಹಾಗೂ ಲಾಕರ್ ನ ಒಳಗೆ ಇಟ್ಟಿದ ಹಳೆಯ ಬಂಗಾರದ ಖಟಾಣಿ ಸರ ಇರಲಿಲ್ಲ. ಆದನ್ನು ಯಾರೊ ಕಳ್ಳತನ ಮಾಡಿ ಹೋಗಿದ್ದರು ಸದರಿ ವಿಷಯವನ್ನು ನನ್ನ ಗಂಡನಿಗೆ ಮತ್ತು ಇತರರಿಗೆ ತಿಳಿಸಿದೆನು. ನಂತರ ಪೋಲಿಸರಿಗೆ ದೂರನ್ನು ನೀಡಿರುತ್ತೇನೆ. ಸಾಕ್ಷಿಯ ದೂರ ನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯ್ನು ನಿಪಿ 1 ಎ ಎಂದು ಗುರುತಿಸಲಾಯಿತು. ನಮ್ಮ ಮನೆಯಲ್ಲಿ ಯಾರು ಕಳ್ಳತನ ಮಾಡಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸ್ವಲ್ಪ ದಿನಗಳ ನಂತರ ಪೋಲಿಸರು ನಮ್ಮ ಮನೆಯಲ್ಲಿ ಕಳ್ಳತನ ಆದ ಬಂಗಾರದ ಖಟಾಣಿ ಸರವನ್ನು ಹುಡುಡಿಕೊಟ್ಟಿರುತ್ತಾರೆ ಅದನ್ನು ನಾನು ಬಿಡಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ಆಭರದ ಪೋಟೊವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ರವರು ಅನುಮತಿ ಕೋರಿರುತ್ತಾರೆ, ಅನುಮತಿಸಲಾಯಿತು.

**ಪಾಟೀ ಸವಾಲು: ಮಾನ್ಯ ಸ.ಸ.ಅ. ರವರಿಂದ.**

ದಿಃ **21-7-2021** ರಂದು ಪೋಲಿಸರು ನನ್ನನ್ನು ಠಾಣೆಗೆ ಕರೆಸಿ ಬಂಗಾರದ ಖಟಾಣಿ ಸರವನ್ನು ಎಂದರೆ ಸರಿ. ಠಾಣೆಯಲ್ಲಿ ಆರೋಪಿ ಪಂಪಾಪತಿಯನ್ನು ಸಹ ತೋರಿಸಿ ಇತನೇ ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ ವ್ಯಕ್ತಿ ಎಂದು ತೋರಿಸಿದರು ಎಂದರೆ ಸರಿಯಲ್ಲ. ಸಾಕ್ಷಿಯ

ಮರುಹೇಳಿಕೆಯನ್ನು ನಿಪಿ 3 ಎಂದು ಗುರುತಿಸಲಾಯಿತು. ಆರೋಪಿತರೆ ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ್ದ ಗೊತ್ತಿದ್ದರು ಸಹ ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ ಏನು ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರ.ದ.ನ್ಯಾ.ದಂ., ಸಂಡೂರು.**